ಕಂದಾಯ ಇಲಾಖೆ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ.ಕಂ.ಪಹಣಿ/ವಿವಾದ/69/2014-15 ದಿನಾಂಕ:

| ವಾದಿಗಳು | ಪ್ರತಿವಾದಿಗಳು |
|---|---|
| 1. ಶ್ರೀ ಎನ್ ದ್ವಾರಕೀಶಪ್ಪ ತಂದೆ ಲೇಟ್ ಕೋಟ್ರಪ್ಪ ಹಗರನೂರು | 1 ಶ್ರೀ ನಂದಿಹಳ್ಳಿ ಗಂಗಮಗಮ ಗಂಡ ಶ್ರೀ ಕೊಟ್ರಪ್ಪ ಹಗರನೂರು |
| | 2 ಕೊಟ್ರಮ್ಮ ಗಂಡ ವಾಮದೇವಪ್ಪ |
| | 3 ಶ್ರೀ ಎನ್ ಕೋಟ್ರೇಶ ಪ್ರಕಾಶ್ ಜಗಧಿಶ್ ಮಹೇಶ |
| | 4 ಕಾಳಮ್ಮ ಗಂಡ ಶಿವಾನಂದಪ್ಪ |
| | 5 ಶ್ರೀ ಸಿದ್ದಮ್ಮ ಗಂಡ ಎನ್ ಬಸವರಾಜ |
| | 6 ಎನ್ ಕಂಠ್ಯಪ್ಪ ತಂದೆ ಕೋಟ್ರೇಶಪ್ಪ |

ವಾದಗ್ರಸ್ತ ಜಮೀನಿನ ವಿವರ

| ಕ್ರಮ ಸಂಖ್ಯೆ | ಸರ್ವೆ ನಂಬರ | ವಿಸ್ತೀರ್ಣ | ಗ್ರಾಮದ ಹೆಸರು |
|---|---|---|---|
| 1 | 540ಎ | 2.73 | ಮಾಗಳ |

ಪೀಠಿಕೆ,

ಹಡಗಲಿ ತಾಲೂಕಿನ ಮಾಗಳ ಗ್ರಾಮದ ಸರ್ವೆ ನಂ 540ಎ, ವಿಸ್ತೀರ್ಣ 2.73 ಎಕರೆ ಜಮೀನನ್ನು ನೋಂದಾಯಿತ ವಲ್ಲದ ಪಾಲು ವಿಬಾಗ ಪತ್ರ ದಿನಾಂಕ:01.09.2014 ಮೇರೆಗೆ ವಾದಿಯಾದ ಶ್ರೀ ಎನ್ ದ್ವಾರಕೀಶಪ್ಪ ತಂದೆ ಲೇಟ್ ಕೊಟ್ರಪ್ಪ ಹಗರನೂರು ಇವರು ವಂಶವೃಕ್ಷ ಹಾಗೂ ಇತರೆ ದಾಖಲೆಗಳನ್ನು ಸಲ್ಲಿಸಿ ತಮ್ಮಗಳ ಹೆಸರಿಗೆ ಪಾಲುವೀಭಾಗದ ಪ್ರಕಾರ ಪಟ್ಟಾ ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿದ ಮೇರೆಗೆ ಹಕ್ಕು ಬದಲಾವಣೆ ಸಂಖ್ಯೆ ಹೆಚ್ 42/2014-15 ರಲ್ಲಿ ನೊಂಧಾಯಿಸಿಕೊಂಡು ಹಿತಾಸಕ್ತರಿಗೆ ನಮೂನೆ 21 ರಲ್ಲಿ ನೋಟೀಸ್ ಜಾರಿ ಮಾಡಲು ಕ್ರಮ ಜರುಗಿಸಿದಾಗ ಪ್ರತಿವಾದಿಗಳು ನಿಗಧಿತ ಅವದಿಯಲ್ಲಿ ತಕರಾರು ಸಲ್ಲಿಸಿರುತ್ತಾರೆ ಕಾರಣ ಕಂದಾಯ ನೀರೀಕ್ಷಕರು ಹೂವಿನಹಡಗಲಿ ಇವರು ಪ್ರಕರಣವನ್ನು ವಿವಾದಾಸ್ಪದ ವೆಂದು ಪರಿಗಣಿಸಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

ಪ್ರಕರಣವನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 129ರಡಯಲ್ಲಿ ವಿಚಾರಣೆಗೆ ತೆಗೆದುಕೊಂಡು ವಾದಿ ಪ್ರತಿವಾದಿಗಳಿಗೆ ನೋಟೀಸು ನೀಡಿ ವಿಚಾರಣೆಯನ್ನು ದಿನಾಂಕ: 19.02.2015 ರಂದು ಪ್ರಾರಂಬಿಸಿ 15.10.2015 ಕ್ಕೆ ಮುಕ್ತಾಯ ಗೋಳಿಸಲಾಯಿತು

ವಾದಿ ಮತ್ತು ಪ್ರತಿವಾದಿಗಳು ತಮ್ಮ ವಕೀಲರ ದ್ವಾರ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಆದರೆ ಪ್ರಕರಣದಲ್ಲಿ ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ನೊಂದಾಯಿತವಲ್ಲದ ಎರಡು ಪಾಲು ಪಟ್ಟಿಗಳಿದ್ದು ಎರಡು ಪಾಲುಪಟ್ಟಿಗಳಲ್ಲಿ ವಂಶವೃಕ್ಷಗಳ ಪ್ರಕಾರ ಎಲ್ಲಾರ ಸಹಿ ಇರುವುದಿಲ್ಲ ಮೇಲಾಗಿ ಸರ್ಕಾರಿ ಆದೇಶ ಸಂಖ್ಯೆ ಆರ್ ಡಿ /11/ಟಿಆರ ಎಂ/2008 ದಿನಾಂಕ 03.12.2010 ಅನ್ವಯ ನೋಂದಾಯಿತ ವಲ್ಲದ ದಸ್ತವೇಜುಗಳನ್ನು ಪರಿಗಣಿಸಬಾರದೆಂಬ ನಿರ್ದೇಶನ ಇರುವ ಕಾರಣ ಈ ಕೆಳಕಂಡ:

:-ಆದೇಶ-:

ಪ್ರಕರಣದ ವಾಸ್ತವಾಂಶ, ಹಿನ್ನೆಲೆ ಹಾಗೂ ದಾಖಲೆಗಳ ಮೇರೆಗೆ ವಾದಿಗಳು ನೋಂದಾಯಿತ ವಲ್ಲದ ಪಾಲು ವಿಭಾಗ ಪತ್ರವನ್ನು ಸಲ್ಲಿಸಿರುವುದರಿಂದ ಮತ್ತು ದಿನಾಂಕ:01.06.2007ರ ಇನ್ನೊಂದು ಪಾಲು ವಿಭಾಗ ಪತ್ರವನ್ನು ಪ್ರತಿವಾಧಿಗಳು ಸಲ್ಲಿಸಿರುವುದರಿಂದ, ಈ ಎರಡು ಪತ್ರಗಳು ಒಂದಕ್ಕೊಂದು ತಾಳೆಯಾಗದ ಕಾರಣ ವಾದಿ ಮತ್ತು ಪ್ರತಿವಾದಿಗಳು ಮಾಗಳ ಗ್ರಾಮದ ಸರ್ವೆ ನಂ 540ಎ, ವಿಸ್ತೀರ್ಣ 2.73 ಎಕರೆ ಜಮೀನಿನ ಬಗ್ಗೆ ಸೂಕ್ತ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 07.2016 ರಂದು ತೆರದ ನ್ಯಾಯಲಯದ್ಲಿ ಗೋಶಿಸಲಾಗಿದೆ

ತಹಶೀಲ್ದಾರರು
ಹಡಗಲಿ